

## ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕೃತಿ 'ಮೂಕಜ್ಜಿಯ ಕನಸುಗಳು' ಕಾದಂಬರಿಯನ್ನು ಆಧರಿಸಿದ, ಅದೇ ಹೆಸರಿನ ಸಿನಿಮಾ ರಾಜ್ಯೋತ್ಸವದ ತಿಂಗಳಲ್ಲಿ ತೆರೆಕಾಣುತ್ತಿದೆ.

■ ಮಹತಿ

ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು' ಕನ್ನಡದ ಅತ್ಯುತ್ತಮ ಕಾದಂಬರಿಗಳಲ್ಲೊಂದು. 1968ರಲ್ಲಿ ಪ್ರಕಟಗೊಂಡ ಈ ಕಾದಂಬರಿಗೆ ಐವತ್ತು ವರ್ಷಗಳು ತುಂಬಿರುವ ಸಂದರ್ಭದ ಆಚರಣೆ ಎನ್ನುವಂತೆ, ಮೂಕಜ್ಜಿ ದೃಶ್ಯರೂಪ ತಳೆದಿದ್ದಾಳೆ. ಕಾರಂತರ ಕಥಾನಾಯಕಿಯನ್ನು ಪಿ. ಶೇಷಾದ್ರಿ ಬೆಳ್ಳಿತೆರೆಗೆ ತಂದಿದ್ದಾರೆ.

ಕಾರಂತರೇ ಹೇಳುವಂತೆ, ಸಾಂಪ್ರದಾಯಿಕತೆಯಿಂದ ಹೆರೆಗಟ್ಟಿದ ಮನಸ್ಸುಗಳನ್ನು ತುಸು ತುಸುವಾಗಿ ಕಾಯಿಸಿ, ಕರಗಿಸುವ ಕೆಲಸ ಮೂಕಜ್ಜಿಯದು. ದೇವರನ್ನು, ದೇವರ ಅವತಾರಗಳನ್ನು, ದೇಗುಲಗಳ ಪರಿಕಲ್ಪನೆಗಳನ್ನು ಪ್ರಶ್ನಿಸುವ ಅಜ್ಜಿಯ ಒಳಗಣ್ಣಿಗೆ ದೇಗುಲಗಳ ಹಿನ್ನೆಲೆಯಲ್ಲಿ ಮತ–ಧರ್ಮಗಳ ಮೇಲಾಟಗಳು, ರಕ್ತಪಾತ ಕಾಣಿಸುತ್ತದೆ. ಈ ನಿಟ್ಟಿನಲ್ಲಿ ಮೂಕಜ್ಜಿ ಒಂದು ಕಾಲದ ಸಾಕ್ಷಿಪ್ರಜ್ಞೆಯಂತೆ ಕಾಣಿಸುತ್ತಾಳೆ. ಮೇಲ್ನೋಟಕ್ಕೆ ಹಾಗೂ ವಯೋಸಹಜವಾಗಿ ಸಾಂಪ್ರದಾಯಿಕವಾಗಿ ಕಾಣಿಸಿದರೂ, ಆಕೆಯ ಧೋರಣೆ ಅತ್ಯಂತ ಆಧುನಿಕವಾದುದು, ವಿಮರ್ಶೆಗೆ ತೆರೆದುಕೊಂಡಿರುವಂತಹದ್ದು. ಇಂಥ ಅಪರೂಪದ ಅಜ್ಜಿ ಈಗ ಬೆಳ್ಳಿತೆರೆಗೆ ಬಂದಿದ್ದಾಳೆ.

ಕಾರಂತರ ಕಾದಂಬರಿಗಳೊಂದಿಗೆ ಶೇಷಾದ್ರಿ ಅವರ ಎರಡನೇ ಅನುಸಂಧಾನವಿದು. ಈ ಮುನ್ನ 'ಬೆಟ್ಟದ ಜೀವ' ಕಾದಂಬರಿಯನ್ನು ಚಲನಚಿತ್ರವಾಗಿಸಿದ್ದ ಅವರು, ಈಗ ಮೂಕಜ್ಜಿಯ ಮೂಲಕ ಮತ್ತೊಮ್ಮೆ ಕಾರಂತರ



ನಿರ್ದೇಶಕ ಪಿ. ಶೇಷಾದ್ರಿ

ಕಲಾಕೃತಿಯೊಂದಿಗೆ ಸೃಜನಶೀಲ ಅನುಸಂಧಾನ ನಡೆಸಿದ್ದಾರೆ.

ಶೇಷಾದ್ರಿ ನಿರ್ದೇಶನದ 'ಮೂಕಜ್ಜಿಯ ಕನಸುಗಳು' ಚಿತ್ರಕ್ಕೆ ಸಮಕಾಲೀನ ಕನ್ನಡ ಸಿನಿಮಾ ಸಂದರ್ಭದಲ್ಲಿ ವಿಶೇಷ ಮಹತ್ವವಿದೆ. ಸಾಹಿತ್ಯಕೃತಿ ಆಧರಿತ ಸಿನಿಮಾಪ್ರಯೋಗಗಳು ವಿರಳವಾಗುತ್ತಿರುವ ಸಂದರ್ಭದಲ್ಲಿ ಕನ್ನಡದ ಶ್ರೇಷ್ಠ ಕಲಾಕೃತಿಯೊಂದು ಸಿನಿಮಾ ಆಗಿರುವುದು ವಿಶೇಷ. ತಾಂತ್ರಿಕ ಪ್ರಭಾವಳಿಯ ಅಬ್ಬರದಲ್ಲಿ ಸಿನಿಮಾಗಳಲ್ಲಿ 'ಕನ್ನಡತನ' ಸವಕಲಾಗುತ್ತಿರುವ ದಿನಗಳಲ್ಲಿ, ಈ ಮಣ್ಣಿನ ಸೊಗಡಿನ ಅಭಿವ್ಯಕ್ತಿಯ ರೂಪದಲ್ಲೂ ಮೂಕಜ್ಜಿಯನ್ನು ಗಮನಿಸಬೇಕಾಗಿದೆ.

ಹನ್ನೊಂದನೇ ಅಂತರರಾಷ್ಟ್ರೀಯ ಸಿನಿಮೋತ್ಸವದ ಕನ್ನಡ ವಿಭಾಗದ ಸ್ಪರ್ಧಾಕಣದಲ್ಲಿ ಮೂಕಜ್ಜಿ ಸಿನಿಮಾಕ್ಕೆ ಮೊದಲ ಬಹುಮಾನ ದೊರೆತಿತ್ತು. 'ನ್ಯಾಷನಲ್ ಆರ್ಕೈವ್ಸ್'ಗೆ ಆಯ್ಕೆಯಾಗುವ ಮೂಲಕ 'ರಾಷ್ಟ್ರಪ್ರಶಸ್ತಿ' ಗೌರವವೂ ದೊರೆತಿದೆ. ಈಗ ಜನ್ನಮನ್ನಣೆಯ ಕಾಲ. ತಮ್ಮ ಮಹತ್ವಾಕಾಂಕ್ಷೆಯ ಚಿತ್ರವನ್ನು ಶೇಷಾದ್ರಿ ತೆರೆಕಾಣಿಸಲು ಪ್ರಯತ್ನಿಸುತ್ತಿದ್ದಾರೆ. ನವೆಂಬರ್ ಮೂರನೇ ವಾರದಲ್ಲಿ ಚಿತ್ರವನ್ನು ತೆರೆಕಾಣಿಸುವುದು ಅವರ ಉದ್ದೇಶ.

ಪ್ರಯೋಗಶೀಲ ಕನ್ನಡ ಸಿನಿಮಾಗಳನ್ನು ತೆರೆಕಾಣಿಸುವುದು ದುಬಾರಿ ಬಾಬತ್ತಾಗಿರುವ ಸಂದರ್ಭವಿದು. ಕಲಾತ್ಮಕ ಚಿತ್ರಗಳ ಮಾತಿರಲಿ, ವ್ಯಾಪಾರಿ ಸಿನಿಮಾಗಳೇ ಪ್ರೇಕ್ಷಕರ ಬರ ಅನುಭವಿಸುತ್ತಿರುವ ಹೊತ್ತಿನಲ್ಲಿ 'ಮೂಕಜ್ಜಿಯ ಕನಸುಗಳು' ಸಿನಿಮಾ ತೆರೆಕಾಣುವ ಪ್ರಯತ್ನದಲ್ಲಿದೆ. ಅಪ್ಪಟ ಕನ್ನಡ ಸಿನಿಮಾವನ್ನು ನೋಡಲು ಹಂಬಲಿಸುವ ಸಹೃದಯರು ಹಾಗೂ ಕಾರಂತರ ಅಭಿಮಾನಿಗಳು ಚಿತ್ರಮಂದಿರಗಳಿಗೆ ಬರುತ್ತಾರೆ ಎನ್ನುವ ವಿಶ್ವಾಸ ಚಿತ್ರತಂಡದ್ದು.

ಕಥೆಯ ಆಯ್ಕೆಯಷ್ಟೇ ಚಿತ್ರತಂಡ ಕೂಡ ಆಕರ್ಷಕವಾಗಿದೆ. ಮೂಕಜ್ಜಿಯಾಗಿ ಹಿರಿಯ ಅಭಿನೇತ್ರಿ ಬಿ. ಜಯಶ್ರೀ ಹಾಗೂ ತಿಪ್ಪಜ್ಜಿಯಾಗಿ ರಾಮೇಶ್ವರಿ ವರ್ಮ ನಟಿಸಿದ್ದಾರೆ. ಸುಬ್ರಾಯನ ಪಾತ್ರದಲ್ಲಿ ಅರವಿಂದ ಕುಪ್ಲೀಕರ್ ನಟಿಸಿದ್ದಾರೆ. ಜಿ.ಎಸ್. ಭಾಸ್ಕರ್ ಅವರ ಛಾಯಾಗ್ರಹಣ ಹಾಗೂ ಪ್ರವೀಣ್ ಗೋಡ್ಖಿಂಡಿ ಸಂಗೀತ ಚಿತ್ರಕ್ಕಿದೆ. 'ಕನ್ನಡ ಮಾಸ'ದ ಸಂದರ್ಭದಲ್ಲಿ ಚಿತ್ರಮಂದಿರಗಳಿಗೆ ಬರುತ್ತಿರುವ ಈ ಚಿತ್ರವನ್ನು ಬೆಂಬಲಿಸುವುದು ಕನ್ನಡೋತ್ಸವದ ಅರ್ಥಪೂರ್ಣ ಆಚರಣೆಯೂ ಹೌದು. ■